**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ :: 78/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಸುಮಂತ್ | **PW**-01 |
| **ತಂದೆಯ ಹೆಸರು** | : | ಗೋಪಾಲ್ | **CW**-01 |
| **ವಯಸ್ಸು** | : | 28 ವರ್ಷ | |
| **ಉದ್ಯೋಗ** | : | ಖಾಸಗಿ ಉದ್ಯೋಗ | |
| **ವಾಸಸ್ಥಳ** | : | ಬೆಂಗಳೂರು. | |

**ದಿನಾಂಕಃ29-11-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ಚಾಸಾ-8 ಮತ್ತು ಚಾಸಾ-9 ರವರು ನನಗೆ ಗೊತ್ತು. ದಿಃ16-11-2024 ರಂದು ಮಧ್ಯ ರಾತ್ರಿ 1.00 ಗಂಟೆಗೆ ಚಾಸಾ-6 ರವರು ನನಗೆ ಫೋನ್ ಕರೆ ಮಾಡಿ, ದಿಃ15-11-2024 ರಂದು ನನ್ನ ತಂದೆ SKMS ಬಸ್ ನಂ.ಕೆ.ಎ 01/ಡಿ-3471 ನಲ್ಲಿ ರಾತ್ರಿ 8.30 ಕ್ಕೆ ಕೊಪ್ಪದಿಂದ ಶೃಂಗೇರಿಗೆ ಬರುತ್ತಿರುವುದಾಗಿ ತಿಳಿಸಿದರು. ಮುಂದುವರೆದು, ಸದರಿ ಬಸ್ ಚಾಲಕನಾಗಿದ್ದ 1 ನೇ ಆರೋಪಿ ಬಸ್ ಅನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿದ ಪರಿಣಾಮ National Highway ರಸ್ತೆಯ ಅಡ್ಡಗದ್ದೆ ಸಮೀಪ ಸದರಿ ಬಸ್ ನ ಹಿಂಬಾಗಿಲಿನ ಬಾಗಿಲಿನಿಂದ ನನ್ನ ತಂದೆ ಕೆಳಗೆ ಬಿದ್ದು, ತೀವ್ರ ಸ್ವರೂಪದ ಗಾಯಗಳನ್ನು ಅನುಭವಿಸಿದರು. ತದನಂತರ ಅವರನ್ನು ಚಿಕಿತ್ಸೆಗಾಗಿ ಶೃಂಗೇರಿಯ ಸರ್ಕಾರಿ ಆಸ್ಪತ್ರೆಗೆ ಸ್ಥಳೀಯರು ಕರೆದುಕೊಂಡು ಹೋದರು ಎಂದು ನನಗೆ ತಿಳಿಸಿದರು. ತದನಂತರ ಹೆಚ್ಚಿನ ಆಸ್ಪತ್ರೆಗಾಗಿ ನನ್ನ ತಂದೆಯವರನ್ನು ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗುವುದಾಗಿ ತಿಳಿಸಿದರು.

2. ನಾನು ತಕ್ಷಣ ಬೆಂಗಳೂರಿನಿಂದ ಕಾರಿನಲ್ಲಿ ಶೃಂಗೇರಿಗೆ ದಿಃ16-01-2024 ರಂದು ಬೆಳಗ್ಗೆ ಸುಮಾರು 6.00 ಗಂಟೆಗೆ ಬಂದೆ. ಆ ಸಮಯಕ್ಕಾಗಲೇ ನನ್ನ ತಂದೆಯವರ ಮೃತ ದೇಹವನ್ನು ಶೃಂಗೇರಿಗೆ ವಾಪಾಸ್ಸು ತಂದಿದ್ದರು. ತದನಂತರದಲ್ಲಿ ನನ್ನ ಸಮಕ್ಷಮ ಶವ ತನಿಖಾ ಮಹಜರ್ ಅನ್ನು ಪೋಲೀಸರು ಜರುಗಿಸಿ ಮೃತರ ದೇಹವನ್ನು ನಮಗೆ ಹಸ್ತಾಂತರಿಸಿದರು. ನಂತರ ಅದೇ ದಿನ ಪೋಲೀಸರು ಅಪಘಾತವಾದ ಸ್ಥಳಕ್ಕೆ ನಮ್ಮನ್ನು

ಕರೆದುಕೊಂಡು ಹೋಗಿ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ನಾನು ತೋರಿಸಿದಂತೆ ಚಾಸಾ-10 ಮತ್ತು ಚಾಸಾ-11 ರವರ ಸಮಕ್ಷಮ ಮಧ್ಯಾಹ್ನ 1.45 ರಿಂದ 2.45 ರವರೆಗೆ ದಾಖಲಿಸಿಕೊಂಡರು. ಆ ಸಂದರ್ಭದಲ್ಲಿ ಪೋಲೀಸರು ಭಾವ ಚಿತ್ರಗಳನ್ನು ತೆಗೆದುಕೊಂಡರು. ಈಗ ಸಾಕ್ಷಿಯು ತಾನು ಪೋಲೀಸ್ ಠಾಣೆಯಲ್ಲಿ ನೀಡಿದ್ದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ -1 ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ -1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ನಿಪಿ-2 ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು, ನಿಪಿ-3 ಮತ್ತು ನಿಪಿ -4 ಎಂದು ಗುರುತಿಸಲಾಯಿತು.

ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.K.C.C ವಕೀಲರಿಂದ ::**

ನಿಪಿ-1 ಅನ್ನು ಠಾಣೆಯಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ. ನಾನು ನಿಪಿ-1 ಅನ್ನು ಓದಿ ಸಹಿ ಮಾಡಿರುತ್ತೇನೆ. ನಿಪಿ-1 ಅನ್ನು ನಾನು ಹೇಳಿದಂತೆ ಬೆರಳಚ್ಚು ಮಾಡಲಾಗಿರುತ್ತದೆ. ಆರೋಪಿತರನ್ನು ಈ ದಿನವೇ ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ದಿನದಂದು ನಾನು ಶೃಂಗೇರಿಯಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಸದರಿ ಬಸ್ ನ ಚಾಲಕರು ಯಾರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 1 ನೇ ಆರೋಪಿತರು ಬಸ್ ಚಾಲಕರು ಆಗಿದ್ದರು ಎಂದು ನುಡಿಯುತ್ತಾರೆ.

2. SKMS ಬಸ್ ಪ್ರತಿನಿತ್ಯ ಓಡಾಡುವ ಬಸ್ ಎಂದರೆ ಸರಿ. ಸದರಿ ಬಸ್ ಗೆ 1 ನೇ ಆರೋಪಿತರೇ ಚಾಲಕರಾಗಿದ್ದಾರೆ ಎಂದರೆ ಸರಿ. ಸದರಿ ಬಸ್ ಅನ್ನು 1 ನೇ ಆರೋಪಿತರೇ ಬಹಳ ವರ್ಷಗಳಿಂದ ಓಡಿಸುತ್ತಿದುದ್ದರಿಂದ ಅಪಘಾತವಾದ ದಿನದಂದು ಸಹ 1 ನೇ ಆರೋಪಿತರೇ ಸದರಿ ಬಸ್ ಅನ್ನು ಚಾಲನೆ ಮಾಡಿದ್ದಿರಬಹುದು ಎಂದು ನಾನು ಹೇಳುತ್ತಿದ್ದೇನೆ ಎಂದರೆ ಸರಿ.

3. ನನ್ನ ಅಣ್ಣನ ಹೆಸರು ಸಫಲ್ ಕುಮಾರ್. ನಿಪಿ-2 ರಲ್ಲಿ ಸುಮಂತ್ ಕುಮಾರ್ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಾನು ನಿಪಿ-2 ರಲ್ಲಿ ನಮೂದಿಸಿರುವ ಅಪಘಾತವಾದ ಸ್ಥಳವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ಮತ್ತು ನಿಪಿ-4 ರಲ್ಲಿರುವ ಭಾವ ಚಿತ್ರಗಳಲ್ಲಿ ರಕ್ತದ ಗುರುತು ಕಂಡುಬರುವುದಿಲ್ಲ, ಅವು ಅಲ್ಲಿರುವುದು ಆಯಿಲ್ ಗುರುತು ಎಂದರೆ ಸಾಕ್ಷಿಯು ಅದು ರಕ್ತದ ಗುರುತು ಎಂದು ನುಡಿಯುತ್ತಾರೆ.

4. ಕೊಪ್ಪ-ಶೃಂಗೇರಿ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ನಾನು ಅಪಘಾತವಾದ ಸ್ಥಳವನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಸದರಿ ಸ್ಥಳವನ್ನು ಗುರುತಿಸಲು ನನ್ನಿಂದ ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ಮತ್ತು ನಿಪಿ -4 ರಲ್ಲಿ ಕಂಡು ಬರುವ ಸ್ಥಳದಲ್ಲಿ ಬಸ್ ನಿಲ್ದಾಣ ಇದೆ ಎಂದರೆ ಸರಿ. ಸದರಿ ಬಸ್ ನಿಲ್ದಾಣದಲ್ಲಿ ಎಲ್ಲಾ ಬಸ್ ಗಳು ತಡೆ ನೀಡಿ, ತದನಂತರ ಸಂಚರಿಸುತ್ತದೆ ಎಂದರೆ ಸರಿ. ಕೊಪ್ಪ-ಶೃಂಗೇರಿ ರಸ್ತೆ ತಿರುವುಗಳಿಂದ ಕೂಡಿದೆ. ತಿರುವುಗಳು ಇರುವ ರಸ್ತೆಯಾಗಿರುವುದರಿಂದ ವಾಹನಗಳು ಅತಿವೇಗವಾಗಿ ಸಂಚರಿಸಲು ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಅಪಘಾತವಾದ ಸ್ಥಳ ಸಮದಟ್ಟಾದ ರಸ್ತೆ ಹೊಂದಿತ್ತು ಎಂದು ನುಡಿಯುತ್ತಾರೆ. ಈ ವಿಚಾರ ಸ್ಥಳ ಪಂಚನಾಮೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ.

5. ನಿಪಿ-2 ರಲ್ಲಿರುವ ಮಾಹಿತಿಯನ್ನು ನಾನು ಹೇಳಿ ಬರೆಸಿರುವುದಿಲ್ಲ. ನಿಪಿ-3 ಮತ್ತು ನಿಪಿ-4 ರಲ್ಲಿ ಪೋಲೀಸರು ಮತ್ತು ನನ್ನ ಜೊತೆ ನಿಂತಿರುವ ಮತ್ತಿಬ್ಬರು ನನ್ನ ಸ್ನೇಹಿತರು. ಸದರಿ ವ್ಯಕ್ತಿಗಳು ಚಾಸಾ-10 ಮತ್ತು ಚಾಸಾ-11 ಆಗಿರುತ್ತಾರೆ. ಚಾಸಾ-10 ಮತ್ತು ಚಾಸಾ-11 ರವರನ್ನು ಸದರಿ ಸ್ಥಳಕ್ಕೆ ನಾನೇ ಕರೆದುಕೊಂಡು ಹೋಗಿರುತ್ತೇನೆ. ನಾನು ನಿಪಿ-1 ರಲ್ಲಿ ಸುಳ್ಳು ವಿಚಾರಗಳನ್ನು ಹೇಳಿ, ಸುಳ್ಳು ದೂರನ್ನು ಆರೋಪಿತರ ವಿರುದ್ಧ ನೀಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿತರ ಅತಿವೇಗ ಚಾಲನೆಯಿಂದ ಸದರಿ ಅಪಘಾತ ಸಂಭವಿಸಿ ನನ್ನ ತಂದೆ ಮೃತ ಹೊಂದಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ಸದರಿ ವಾಹನವನ್ನು ಆ ದಿನ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.